# ಪಾಪ ಪರಿಹಾರ ಮತ್ತು ದೈವಿಕ ಕಾಳಜಿ

**1. ಮೂಲ : ಬ್ರೂಸ್ ಎನ್. ಕ್ಯಾಮರನ್ ಅನುವಾದ: ಪಾಸ್ಟರ್ ಚೆಲುವರಾಜು**

**ಪೀಠಿಕೆ :-** ಕಳೆದೆರಡು ವಾರಗಳಲ್ಲಿ ಪಾಪ ವಿಶ್ವ ಹಾಗೂ ಪ್ರಪಂಚವನ್ನು ಹೇಗೆ ಪ್ರವೇಶಿಸಿತು ಎಂದು ಅಧ್ಯಾಯನ ಮಾಡಿದೆವು. ಈ ವಾರ ಪಾಪ ಮತ್ತು ನಿತ್ಯಮರಣದಿಂದ ತಪ್ಪಿಸಿಕೊಳ್ಳವುದು ಹೇಗೆ ಎಂಬುದನ್ನು ಕುರಿತು ಅಧ್ಯಾಯನ ಮಾಡೋಣ. ನಮ್ಮನ್ನು ಪಾಪದಿಂದ ಬಿಡಿಸಲು ಮೊದಲಿಗೆ ಆರಂಭವಾದ ಕೆಲಸವೇನು? ವಿಶ್ವದಲ್ಲಿಯೂ ಮತ್ತು ಪ್ರಪಂಚದಲ್ಲಿಯೂ ಪಾಪದ ಪ್ರವೇಶ ಹೇಗಾಯಿತು. ಎಂಬುದರ ಆಧಾರದ ಮೇಲೆ, ಪಾಪಮಾಡುವುದನ್ನು ತಡೆಯುವುದು ಹೇಗೆ ಎಂದು ಕಳೆದೆರೆಡು ವಾರ ಕಲಿತೆವು. ದೇವರು ನಮ್ಮನ್ನು ಪಾಪದಿಂದ ಬಿಡಿಸಲು ಮೊದಲಿಗೆ ಆರಂಭವಾದ ಕೆಲಸವೇನು? ವಿಶ್ವದಲ್ಲಿಯೂ ಮತ್ತು ಪ್ರಪಂಚದಲ್ಲಿಯೂ ಪಾಪದ ಪ್ರವೇಶ ಹೇಗಾಯಿತು ಎಂಬುದರ ಆಧಾರದ ಮೇಲೆ, ಪಾಪಮಾಡುವುದನ್ನು ತಡೆಯುವುದು ಹೇಗೆ ಎಂದು ಕಳೆದೆರೆಡು ವಾರ ಕಲಿತೆವು. ದೇವರು ನಮ್ಮನ್ನು ಪಾಪದಿಂದ ಬಿಡುಗಡೆಗೊಳಿಸುತ್ತಾರೆ ಎಂಬುದರ ಆಧಾರದ ಮೇಲೆ, ನೀತಿಯನ್ನು ಕುರಿತು ನಾವು ಏನು ಕಲಿಯಬಹುದು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ನೇರವಾಗಿ ಸತ್ಯವೇದ ಅಧ್ಯಾಯನಕ್ಕೆ ಹೋಗೋಣ:

## I. ನಮ್ಮ ಇಂದಿನ ಸ್ಥಿತಿಗತಿ:

(ಅ) **ರೋಮ 3:10-12**ನ್ನು ಓದಿಕೊಳ್ಳಿ. ನಮ್ಮ ಪರಿಸ್ಥಿತಿ ಹೇಗಿದೆ?
ಆದಾಮ ಮತ್ತು ಹವ್ವಳಗಿಂತ ಉತ್ತಮ ಜೀವನ ನಡೆಸಿ, ಪಾಪದ ಸಮಸ್ಯೆಯಿಂದ ದೂರವಿರಲು ಸಾಧ್ಯವೇ? [ಇಲ್ಲ! ನೀತಿವಂತನು ಇಲ್ಲ; ಒಬ್ಬನಾದರೂ ಇಲ್ಲ]

(ಆ) **ರೋಮ 3:19-20**ನ್ನು ಓದಿಕೊಳ್ಳಿ. ನೀವು ಬಹಳ ಜನರ ಹತ್ತಿರ ಮಾತಾಡಿ ನೋಡಿ. ಅವರು ತಾವು ತುಂಬಾ ಒಳ್ಳೇ ಜೀವನವನ್ನು ಜೀವಿಸಿದೆವು ಎಂದೇ ಅಲೋಚಿಸುತ್ತಾರೆ. ಯಾವ ಆಧಾರದ ಮೇಲೆ ಈ ರೀತಿಯಾಗಿ ಯೋಚಿಸುತ್ತಾರೆ? [ಬಹಳಷ್ಟು ಮಂದಿ ಒಂದು ಅಳತೆಯ ಸ್ಕೇಲು ಅಥವಾ ಪರಿಮಾಣ ಗೊತ್ತುಮಾಡಿಕೊಂಡು ಬಿಟ್ಟಿದ್ದಾರೆ. ಒಂದು ಉದಾ : ಅವರು ಒಳ್ಳೆಯವರು ಏಕೆಂದರೆ ಅವರು ಯಾವತ್ತೂ ಜೈಲಿಗೆ ಹೋದವರಲ್ಲ ಅಥವಾ ಬೇರೋಬ್ಬರನ್ನು ತುಂಬಾ ಮರ್ಯಾದೆಯಿಂದ ಕಾಣುತ್ತಾರೆ.]

(i) ನೀವೂ ಸಹ ನಿಮ್ಮ ಜೀವನವನ್ನು ಈ ರೀತಿಯಾಗಿ ವಿಶ್ಲೇಷಿಸುತ್ತೀರಾ?

(ii) ಹತ್ತು ಆಜ್ಞೆಗಳನ್ನು ಅಳತೆಯ ಸ್ಕೇಲು ಅಥವಾ ಪರಿಮಾಣ ಮಾಡಿಕೊಂಡು, ಕೆಲವರು ಅದನ್ನು ಕೈಗೊಳ್ಳುತ್ತಿರುವುದರಿಂದ ತಾವು ನೀತಿವಂತರು ಎಂಬ ತೀರ್ಮಾನ ತೆಗೆದುಕೊಳ್ಳುವವರ ಬಗ್ಗೆ ಈ ವಾಕ್ಯಗಳು) ಹೇಳುವುದೇನು?

(iii) ಬರೀ ಹತ್ತೇ ಆಜ್ಞೆಗಳಿರುವುದು, ಆದರೂ ಅವುಗಳನ್ನು ಕೈಗೊಳ್ಳುವರು ಕಷ್ಟವೇಕೆ?

(iv) **ರೋಮ 3:20**ನ್ನು ಓದಿದಾಗ, ದೇವರು ನಮಗೆ 10 ಆಜ್ಞೆಗಳನ್ನು ಕೊಟ್ಟ ಉದ್ದೇಶದ ಬಗ್ಗೆ ನಾವು ಕಲಿಯುವುದೇನು? [ಹತ್ತು ಆಜ್ಞೆಗಳನ್ನು ಕೈಗೊಂಡ ಮಾತ್ರಕ್ಕೆ ನಾವು ಶಿಕ್ಷಿಸಲ್ಪಡುವುದಿಲ್ಲವೆಂದು ನಮಗೆ ಕಲಿಸಲಾಗಿದೆ.

ಪುಣ್ಯಕಾರ್ಯಗಳನ್ನು ಮಾಡಿಯೂ ಜನ ನೀತಿವಂತರೆಂಬ ಹೆಸರು ಗಳಿಸಲಾರರೆಂದೂ ನಾವು ಕಲಿತ್ತಿದ್ದೇವೆ. ಆದರೆ 10 ಆಜ್ಞೆಗಳ ಒಂದು ಒಳ್ಳೇ ಕಾರ್ಯವೆಂದರೆ ನಮ್ಮ ಹೃದಯದ ಸ್ವರೂಪವೇನು ಎಂಬುದನ್ನು ನಮಗೆ ಪರಿಚಯಿಸುತ್ತದೆ. ದಶಾಜ್ಞೆಗಳನ್ನು ಕೈಗೊಳ್ಳುವರು ಎಂದರೇನು ಎಂಬುದನ್ನು ನಾವು ನಿಜವಾಗಿಯೂ ಅರ್ಥಮಾಡಿಕೊಂಡಾಗ, (**ಮತ್ತಾ 5:21-22** ಮತ್ತು **5:27-28**ನ್ನು ಓದಿಕೊಳ್ಳಿ) ನಾವೇಷ್ಟು ನೀತಿವಂತರು ಎಂಬುದನ್ನು ಸರಳವಾಗಿ ಕಲಿತುಕೊಳ್ಳುತ್ತೇವೆ.

## II. ಮಹಿಮೆಯ ನಿರೀಕ್ಷೆ

(ಅ) ನಮ್ಮ ಸ್ವಂತ ಪ್ರಯತ್ನಗಳಮದ ದಶಾಜ್ಞೆಗಳನ್ನು ಕೈಗೊಂಡು ದೇವರು ಗೊತ್ತುಮಾಡಿದ ಪರಿಮಾಣವನ್ನು ನಾವು ಮುಟ್ಟಲಾಗದಿದ್ದರೆ, ಕೊನೆಗೆ ನಮಗುಳಿದಿರುವ ನಿರೀಕ್ಷೆಯೇನು?

(ಆ) **ರೋಮ 5:12**ನ್ನು ಓದಿಕೊಳ್ಳಿ. "ದೇವರ ಮಹಿಮೆಯನ್ನು ಹೊಂದುವೆವೆಂಬ ಭರವಸೆ" ಎಂದರೇನು? [ಅಂಥಹ ಭರವಸೆ ನಮಗೆ ಉಲ್ಲಾಶ ನೀಡುತ್ತದೆ.]

(i) ಇದು ನಂಬಿಕೆ ಮತ್ತು ಕೃಪೆಯನ್ನು ಕುರಿತು ಏನಾದರೂ ಹೇಳುತ್ತಿದೆಯೇ? [ದೇವರ ಮಹಿಮೆಯೆಂದರೆ : ಆತನ ಪ್ರಸನ್ನತೆಯಲ್ಲಿರುವದು. ಆತನ ಪ್ರಸನ್ನತೆಗೆ ಹೋಗಲು ಇರುವ ಎರಡೇ ಮಾರ್ಗಗಳೆಂದರೆ: ನಂಬಿಕೆ ಮತ್ತು ಭರವಸೆ.]

(ii) ದೇವರ ಮಹಿಮೆಯ ಭರವಸೆಯಲ್ಲಿ ಯೇಸುಸ್ವಾಮಿಯ ಪಾತ್ರವೇನು? [**ರೋಮ 5:1** ನಮಗೆ, "ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ" ಎಂದು ಹೇಳುತ್ತದೆ. ದೇವರ ಕೃಪಾಶ್ರಯ ನಮ್ಮೊಂದಿಗಿರುವುದರಿಂದ, ಆತನ ಮಹಿಮೆಯಲ್ಲಿ ನಾವಿರುತ್ತೇವೆ ಎಂಬ ಭರವಸೆ ನಮಗಿರಲಿ. ಇದು ಪರಲೋಕದ ವಾಗ್ದಾನ. ಯೇಸುಸ್ವಾಮಿಯ ಮೇಲಿನ ನಂಬಿಕೆಯಿಂದ ಈ ವಾಗ್ದಾನ ನಮ್ಮ ಜೀವನದಲ್ಲಿ ನೆರವೇರುವಂತಹುದಾಗಿದೆ.]

(iii) ಯೇಸುಸ್ವಾಮಿಯ ಮೇಲಿನ ಭರವಸೆ ನಮಗೆ ನೀಡುವುದೇನು? ("ದೇವರೊಂದಿಗಿನ ಸಮಾಧಾನ" (ವಚನ 1) ಮತ್ತು "ಉಲ್ಲಾಸ"**(ವಚನ 2)]**

(ಇ) **ರೋಮ 5:3-4**ನ್ನು ಓದಿರಿ. ಇಲ್ಲಿ ನಮೂದಿಸಿರುವ ಕೆಟ್ಟ ವಿಷಯಗಳ ಪಟ್ಟಿಯನ್ನು ಗಮನಿಸಿ. ಕೆಟ್ಟ ಕಾರ್ಯಗಳೂ ಭರವಸೆಯೊಂದಿಗೆ ಕೊನೆಗೊಳ್ಳುತ್ತಿವೆಯೇ? ಸರಣಿಯೋಪಾದಿಯ ಈ ಕಾರ್ಯಗಳು ನಿರೀಕ್ಷಣದಲ್ಲಿ ಮುಕ್ತಾಯಗೊಳ್ಳುತ್ತಿರುವುದೇಕೆ?

(i) ದೇವರ ಸಮ್ಮುಖದಲ್ಲಿ ಉಲ್ಲಾಸಪಡುವ ವಿಷಯವನ್ನು ಕುರಿತು ಮಾತನಾಡುತ್ತಿರುವಾಗ ಈ ಕೆಟ್ಟ ಕಾರ್ಯಗಳ ಮಾತೇಕೆ? [ಕಾಲಾನುಕಾಲಗಳಲ್ಲಿ ನಾವು ತುಂಬಾ ಕ್ಲಿಷ್ಟವಾದ ಸಮಸ್ಯೆಗಳನ್ನು ಎದುರಿಸುತ್ತಿರುತ್ತೇವೆ. ಎಂಬುದೇ ಜೀವನದ ನಿಜ ಸಂಗತಿಯಾಗಿದೆ.]

(ii) ಸಂಕಷ್ಟಗಳು ನಿರೀಕ್ಷೆಯನ್ನುಂಟುಮಾಡಿರುವ ಸತ್ಯ ನಿಮ್ಮ ಜೀವನಾನುಭವಕ್ಕೆ ಬಂದಿದೆಯೇ? [ನಾವು ನಂಬಿಗಸ್ತರಾಗಿದ್ದರೆ, ಕೆಟ್ಟಕಾರ್ಯಗಳ ಕುರಿತ ಒಳ್ಳೆ ಸಂಗತಿಯೇನೆಂದರೆ ಅದು ನಮ್ಮ ನಿರೀಕ್ಷೆಯನ್ನು ಮೊನಚುಗೊಳಿಸುತ್ತದೆ ಎಂದು ಹೇಳುವವದುಂಟು. ದೇವರ ಪ್ರಮಾಣಕ್ಕೆ ತಕ್ಕಂತೆ ನಮ್ಮ ಜೀವನವಿಲ್ಲ ಎನಿಸಿದಾಗ, ಯೇಸುಸ್ವಾಮಿಯ ಮುಖಾಂತರ ನಮಗೆ ನೀಡಿರುವ ದೇವರ ಕೃಪೆ ಮತ್ತು ಸಮಾಧಾನದ ಮೇಲೆ ಭರವಸೆಯಿಡಬೇಕು.]

## III. ರಕ್ಷಣೆಯ ಯೋಜನೆ

(ಅ) **ರೋಮ 5:6**ನ್ನು ಓದಿಕೊಳ್ಳಿರಿ. ಯೇಸುಸ್ವಾಮಿ ನಮ್ಮನ್ನು ರಕ್ಷಿಸಲೆಂದು ದೇವರು ಯಾವಾಗ ಮತ್ತು ಯಾಕೆ ತೀರ್ಮಾನ ತೆಗೆದುಕೊಂಡರು? [ಯಾವಾಗ ಎಂಬ ಪ್ರಶ್ನೆಗೆ ಸತ್ಯ

(i) **ಎಫೆಸ 1:4-6**ನ್ನು ಓದಿಕೊಳ್ಳಿರಿ. ದೇವರು ಈ ಯೋಜನೆಯನ್ನು ಯಾವಾಗ ತೀರ್ಮಾನಮಾಡಿದರು? ಸೈತಾನ ಮತ್ತು ಸೈತಾನನ ಮಂದಿ ಈ ಪ್ರಪಂಚವನ್ನು ಗೊಂದಲಮಯವಾಗಿಸಿದ ಮೇಲೆಯೇ? [ಈ ಪ್ರಶ್ನೆಗಳು ನಮಗೆ, ದೇವರು ಈ ಭೂಮಿಯನ್ನು ಸೃಷ್ಟಿಸುವ ಮುನ್ನವೇ ತಮ್ಮ ಮನಸ್ಸಿನಲ್ಲಿಟ್ಟುಕೊಂಡಿದ್ದರು ಎಂಬ ಸುಳಿವು ಕೊಡುತ್ತದೆ!]

(ii) ನಾವು ಈ ಭೂಮಿಯನ್ನು ಈ ಮಟ್ಟದಲ್ಲಿ ಹಾಳುಮಾಡುತ್ತೇವೆ ಎಂದು ತಿಳಿದೂ ನಮ್ಮನ್ನು ಈ ಭೂಮಿಯ ಮೇಲೆ ಸೃಷ್ಟಿಸಿದರು ಎಂದು ಅರ್ಥಮಾಡಿಕೊಳ್ಳಬಹುದೆ? [ಬಲಹೀನತೆಯುಳ್ಳ] ಮನುಷ್ಯ ಕೆಡಿಸಿದ್ದನ್ನು ತಾನು ನಂತರ ಸರಿಪಡಿಸಿಕೊಂಡರಾಯಿತು ಎಂದುಕೊಂಡರೇ? [ಇದಕ್ಕಿಂತ ಹೆಚ್ಚಿನ ತೀರ್ಮಾನಕ್ಕೆ ಬರುವುದು ಅಸಾಧ್ಯ ಎನಿಸುತ್ತದೆ]

(ಆ) **ರೋಮ 5:7-8**ನ್ನು ಓದಿಕೊಳ್ಳಿರಿ. ದೇವರಿಗೆ ಬೆನ್ನುಕೊಟ್ಟು ಓಡಿಹೋದ ಮಂದಿಯ ಸಲುವಾಗಿ ಇಷ್ಟೊಂದು ಪ್ರೀತಿ ತೋರಲು ದೇವರ ಮೇಲಾದ ಪ್ರೇರಣೆ ಏನು? [ಪ್ರೀತಿ ನಮ್ಮಲ್ಲಿ ಯಾರಿಂದಲೂ ಮಾಡಲಾಗದ್ದನ್ನು ದೇವರು ಮಾಡಿ ತೋರಿಸಿದರು. ನಮ್ಮಿಂದ ಕಲ್ಪಿಸಿನೋಡಲೂ ಸಾಧ್ಯವಾಗದ ಶ್ರೇಷ್ಠ ಪ್ರೀತಿಯೊಂದು ಅವರಲ್ಲಿರುವುದರಿಂದಲೇ ಅವರಿಗೆ ಹೀಗೆ ನಡೆದುಕೊಳ್ಳಲು ಸಾಧ್ಯವಾಯಿತು. ನಾವು ಒಳ್ಳೆಯವರು ಅಥವಾ ನೀತಿವಂತರು ಅಥವಾ ಯೋಗ್ಯರು ಎಂದೇನಿಸಿಕೊಳ್ಳುವ ತನಕ ದೇವರು ಕಾಯ್ದುಕೊಳ್ಳಲಿಲ್ಲ.]

(i) ಕೆಲವರು ತಮ್ಮನ್ನು ತಾವೇ "ಆಯೋಗ್ಯರೆಂದು" ಪಟ್ಟ ಕೊಟ್ಟುಕೊಂಡು, ಆಲಯದಿಂದ ಹೊರಗುಳಿವುದನ್ನು ನೋಡಿದ್ದೀರಾ? ಈ ವಾಕ್ಯ ಅವರಿಗೆ ಬೋಧಿಸುವುದೇನು?

(ಇ) **ರೋಮ 8:32**ನ್ನು ಓದಿಕೊಳ್ಳಿ. ದೇವರು ನಮಗಾಗಿ ಮಾಡಿರುವ ತ್ಯಾಗ ಸ್ಮರಣೀಯವೆಂದು **ರೋಮ 5:7-8** ಹೇಳುತ್ತದೆ. ಇಂಥಹ ಆಲೋಚನೆಗೆ **ರೋಮ 8:32** ಮತ್ತೇನನ್ನು ಸೇರಿಸುತ್ತದೆ? ಮಿಗಿಲಾಗಿ ಅವರು ನಮ್ಮನ್ನು ಪ್ರೀತಿಸುತ್ತಾರೆಂದು ಅದು ನಮಗೆ ತೋರಿಸಿದೆ. ಇದರ ಅರ್ಥ: ದೇವರು, ನಮಗೆ

ಸಿಗಬೇಕಾದ ಯಾವುದರಿಂದಲೂ ವಂಚಿಸುವುದಿಲ್ಲ. ಎಲ್ಲವನ್ನೂ ನಮಗೆ ಕೊಡುತ್ತಾರೆ. ರಕ್ಷಣೆ ಯೋಜನೆ ಏಕೆ ಎಂಬುದಕ್ಕೆ ಉತ್ತರ: ದೇವರು ನಮ್ಮನ್ನು ಅಪರಿಮಿತವಾಗಿ ಪ್ರೀತಿಸುತ್ತಾರೆ.ಇದು ಆಶ್ಚರ್ಯ!]

(ಈ) **ರೋಮ 8:33-34**ನ್ನು ಓದಿಕೊಳ್ಳಿ. ಇದಕ್ಕಿಂತಲೂ ಹೆಚ್ಚಾಗಿ ಯೇಸುಸ್ವಾಮಿ ನಮಗೆ ಇನ್ನೇನು ಮಾಡಬೇಕಾಗಿತ್ತು? [ಈಗ ಯೇಸುಸ್ವಾಮಿ ಪರಲೋಕದಲ್ಲಿ ನಮಗಾಗಿ ಬೇಡಿಕೊಳ್ಳುತ್ತಿದ್ದಾರೆ. ಪುರಾತನ ಇಸ್ರಾಯೇಲ್ಯರ ಕಾಲದಲ್ಲಿ, ಮಹಾಯಾಜಕ, ದೋಷ ಪರಿಹಾರಕ ಮಹಾದಿನದಂದು ಜನರಿಗಾಗಿ ಬೇಡಿಕೊಂಡಂತೆ, ಇಂದು ಯೇಸುಸ್ವಾಮಿ ನಮಗಾಗಿ ಪರಲೋಕದ ಪರ್ಣಶಾಲೆಯಲ್ಲಿ ಬೇಡಿಕೊಳ್ಳುತ್ತಿದ್ದಾರೆ.]

(i) ನಮಗೀಗ ಪಾತ್ರದಾರಿಗಳು ಪರಿಪೂರ್ಣರಾಗಿ ಅರ್ಥವಾಗಿದ್ದಾರೆ:ನಮಗೆ ವಿರೋಧವಾಗಿ ದೂರು ಹೇಳುವರಾರು? ನಮ್ಮನ್ನು ಹಿಂಡಿಸುವವರ್ಯಾರು?

[**ಪ್ರಕಟಣೆ 12:10,** ''ಮಾತುಗಾರನು ದೊಬ್ಬಲ್ಪಟ್ಟಿದ್ದಾನೆ'' ಎಂದು ಹೇಳುತ್ತದೆ. ಹಾಗೆ ದೊಬ್ಬಲ್ಪಟ್ಟವನು ಬೇರೆ ಯಾರೂ ಅಲ್ಲ, ಆತನೇ ಸೈತಾನ. ನಮ್ಮೆಲ್ಲರನ್ನು ಪಾಪಕ್ಕೆ ದೂಡಿದ ಸೈತಾನನೇ ಯೇಸುಸ್ವಾಮಿಯವರಿಂದ ಸೋಲಿಸಲ್ಪಟ್ಟಿದ್ದಾನೆ. ಆದರೂ ನಮ್ಮ ಮೇಲೆ ದೂರು ಹೇಳುವುದನ್ನು ಆತ ಇನ್ನೂ ನಿಲ್ಲಿಸಿಲ್ಲ.]

(ii) ಜನ ನಿಮ್ಮನ್ನು ಖಂಡಿಸುವಾಗ ಮತ್ತು ನಿಮಗೆ ವಿರುದ್ಧವಾಗಿ ದೂರು ಹೇಳುವಾಗ ನಿಮ್ಮ ನಿರೀಕ್ಷೆಗೆ ಏನಾಗುತ್ತದೆ?

(iii) ಯೇಸುಸ್ವಾಮಿ ಮತ್ತು ಸೈತಾನನ ನಡುವಿನ ಘರ್ಷಣೆಯಲ್ಲಿ ಯಾರು ಗೆಲ್ಲುತ್ತಾರೆ?

[''ದೊಬ್ಬಲ್ಪಟ್ಟ''ದ್ದನ್ನು ಕುರಿತು ಹೇಳಿದ ವಾಕ್ಯವೇ, ಸೈತಾನ ನಮ್ಮ ಕಡೆಗೆ ಇಳಿದುಬಂದಿದ್ದಾನೆ ಎಂದೂ ಸಹ ತಿಳಿಸುತ್ತದೆ. ಸೈತಾನ ನೆಲದ ಮೇಲೆ ನಿಂತಿದ್ದಾನೆ. ಪರಲೋಕ್ಕೇರಿ ಹೋಗಿರುವ ಯೇಸುಸ್ವಾಮಿ ವಿಜಯೀಶಾಲಿಯಾಗಿದ್ದಾರೆ. ನಮ್ಮ ವಿರುದ್ಧದ ದೂರು ಮತ್ತು ಆಕ್ಷೇಪಣೆಗಳು ಆಕ್ಷೇಪಗಾದಂತೆಯೇ ಮುಂದುವರಿಯುತ್ತವೆ.

(ಉ) **ರೋಮ 8:34**ನ್ನು ಓದಿಕೊಳ್ಳಿ. ಯೇಸುಸ್ವಾಮಿ ನಮಗಾಗಿ ಯಾಕೆ ವಿಜಯೀಶಾಲಿಗಳಾಗಬೇಕು? [ಈ ವಾಕ್ಯ ನಮಗಾಗಿ ಬೇಡುವಾತನಿಗೆ ದೇವರ ಕಿವಿಯಿದೆ. ಅವರು ತಂದೆಯ ಬಲಪಾರ್ಶ್ವದಲ್ಲಿದ್ದಾರೆ. ಯೇಸುಸ್ವಾಮಿ ಪರಲೋಕ ಯೋಜನೆಯಂತೆ ನಡೆದುಕೊಂಡರು. ಅದರಂತೆ ಜೀವಿಸಿದರು; ಮರಣಿಸಿದರು ಮತ್ತು ನಮಗಾಗಿ ಮತ್ತೆ ಪುನರುತ್ಥಾನಗೊಂಡರು. ಈಗ ತಂದೆಯ ಬಳಿ ವಿಶೇಷ ಸ್ಥಾನ ಪಡೆದುಕೊಂಡಿದ್ದಾರೆ. ಅಲ್ಲಿ ಅವರು ನಮ್ಮ ವಿಷಯದಲ್ಲಿ ಒಳ್ಳೆಯ ಮಾತುಗಳನ್ನಾಡುತ್ತಾರೆ. ನಮ್ಮನ್ನು ಈಗಾಗಲೇ ಪ್ರೀತಿಸುವ ತಂದೆಯ ಬಳಿ ನಾಲ್ನುಡಿಗಳನ್ನಾಡುತ್ತಾರೆ. ಈ ಯೋಜನೆಯನ್ನು ನಾನು ಬಹಳ ಇಷ್ಟಪಡುತ್ತೇನೆ.!]

(ಇ) **ರೊಮ 8:35**ನ್ನು ಓದಿಕೊಳ್ಳಿ. ''ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಎಂದು ಈ ವಾಕ್ಯ ಕೇಳುತ್ತದೆ. ದೇವರ ಯೋಜನೆಯಿಂದ ನಾವು ತಪ್ಪಿಸಿಕೊಳ್ಳುವಂತೆ ಮಾಡುವುದು ಯಾವುದು ಮತ್ತು

ಆತನ ಯೋಜನೆಯಲ್ಲಿ, ಆತನ ಪಾತ್ರವನ್ನು ನೆರವೇರಿಸುವುದಕ್ಕೆ ಅಡ್ಡಿಪಡಿಸುವುದು ಯಾವುದು?

(i) ದೇವರ ಪ್ರೀತಿಯಿಂದ ನಮ್ಮನ್ನು ಅಗಲಿಸುವ ಕೆಲವು ಕಾರ್ಯಗಳನ್ನು ಈ ಪಟ್ಟಿಮಾಡಿದೆ. ಆ ಕಾರ್ಯಗಳಲ್ಲಿರುವ ಸಾಮಾನ್ಯತೆ ಯಾವುದು? [ಎಲ್ಲವೂ ಕೆಟ್ಟವುಗಳೇ. ಅದಕ್ಕಿಂತಲೂ ಹೆಚ್ಚಾಗಿ ಇವೆಲ್ಲಕ್ಕೂ ಒಂದು ಬಾಹ್ಯ ಮೂಲವಿದೆ. ಅವೆಲ್ಲಾ ನಮ್ಮ ಹೊರಗಿನ ಪ್ರಪಂಚಕ್ಕೆ ಸಂಬಂಧಪಟ್ಟವು.]

(ii) ನಮ್ಮನ್ನು ದೇವರ ಪ್ರೀತಿಯಿಂದ ಅಗಲಿಸುವಿಕೆಗೆ ವಿವಿಧ ಸಾಧ್ಯಾಸಾಧ್ಯತೆಗಳನ್ನು ಕುರಿತು ಚಿಂತಿಸುತ್ತಿರುವಾಗ, 35ನೇ ವಾಕ್ಯದಲ್ಲಿ ಕೇಳಲ್ಪಟ್ಟಿರುವ ಪ್ರಶ್ನೆಗೆ ಅವು ಸೂಚಿಸುವ ಉತ್ತರವೇನು? [ಆ ಬಾಹ್ಯಪ್ರಪಂಚದ ಯಾವ ಕಾರ್ಯಗಳೂ ನಮ್ಮನ್ನು ದೇವರಿಂದ ಅಗಲಿಸಲಾರವು. ಅಂದ ಮೇಲೆ ದೇವರ ಪ್ರೀತಿಯಿಂದ ನಾವು ನಾವಾಗಿಯೇ ಅಗಲಿ ಹೋಗುತ್ತೇವೆ.]

(iii) **ರೋಮ 8:37**ನ್ನು ಓದಿಕೊಳ್ಳಿ. ನಮ್ಮ ಬಾಹ್ಯ ಪ್ರಪಂಚದ ಸಮಸ್ಯೆಗಳ ವಿರುದ್ಧ ನಮಗೆ ಗೆಲುವು ಕೊಡುವವರ್ಯಾರು? [ಯೇಸುಸ್ವಾಮಿ ನಮ್ಮನ್ನು "ಜಯಶಾಲೀ"ಗಳಿಗಿಂತಲೂ ಹೆಚ್ಚಿನವರಾಗುವಂತೆ ಮಾಡುತ್ತಾರೆ.]

(i) ನೀವು ಜಯಶಾಲಿ ಎಂದು ಭಾವಿಸುತ್ತೀರಾ?

(ಉ) ಜಯಶಾಲಿಗಳೂ ಕೆಲವೊಮ್ಮೆ ಕಾಲಾಂತರದಲ್ಲಿ ತಮ್ಮ ಶತ್ರುಗಳು ವಿರುದ್ಧ ಜಯಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾರೆ. **ರೋಮ 8:38-39**ನ್ನು ಓದಿನೋಡಿ. ನಮಗೆ ಎಂಥಹ ನಿರೀಕ್ಷೆ ಮತ್ತು ಆತ್ಮ ವಿಶ್ವಾಸವನ್ನು ಯಾವುದು ಕೊಡುತ್ತಿದೆಯೋ ಅದು ನಮಗೆ ಸೋಲಾಗದಂತೆಯೂ ನೋಡಿಕೊಳ್ಳುತ್ತದೆ. [ಈ ಸೃಷ್ಟಿಯಲ್ಲಿರುವ ಯಾವುದು ನಮ್ಮನ್ನು ದೇವರಿಂದ ಅಗಲಿಸುವಷ್ಟು ಬಲಶಕ್ತಿ ಪಡೆದುಕೊಂಡಿಲ್ಲ. ದೇವರಿಗೆ ಸ್ತೋತ್ರ!]

(ಊ) ನನ್ನ ಸ್ನೇಹಿತನೇ ಯಾಕೆ ದೇವರು ನಿನ್ನನ್ನು ರಕ್ಷಿಸಲು ಮಧ್ಯಸ್ತಿಕೆ ವಹಿಸಿದರೆಂದು ಈಗ ನಿನಗೆ ಅರ್ಥವಾಯಿತೇ? ದೈನಂದಿನ ಬಾಳು, ನೀವು ಕಷ್ಟಸಂಕಟಗಳನ್ನು ಎದುರಿಸುವಂತೆ ಮಾಡಿದರೂ, ನೀವು ಯೇಸುಸ್ವಾಮಿಯ ತ್ಯಾಗವನ್ನು ಮತ್ತು ಆತನು ನಿಮಗಾಗಿ ಸಾಧಿಸಿದ ಗೆಲುವನ್ನು ಅಂಗೀಕರಿಸಲು ತೀರ್ಮಾನಿಸಿಕೊಂಡರೆ, ಈ ಸೃಷ್ಟಿಯಲ್ಲಿ ದೇವರ ಪ್ರೀತಿಯಿಂದ ಅಗಲಿಸುವುದು ಒಂದೂ ಇಲ್ಲ. ಆತನನ್ನು ಅಂಗೀಕರಿಸಲು ಇಂದೇ ತೀರ್ಮಾನ ಮಾಡಬಾರದೇಕೆ?

**(V) ಮುಂದಿನವಾರ : ದೋಷ ಪರಿಹಾರ ಪ್ರಕಟಿಸಲ್ಪಟ್ಟಿತು.**